# ಆಹಾ ಸುದ್ದಿ!

★ ಸಸಿತೋಟ



ಬ್ರೆಜಿಲ್‌ನ ಈ ಸಾಹಸಿಗ ಲೂಯಿಸ್ 10 ಸಾವಿರ ಅಡಿ ಮೇಲಿರುವ ಬಂಡೆಯ ತುದಿಯಿಂದ ಕಾಲಿನ ಬಲದಿಂದಲೇ ತೂಗಾಡಿದ. ಕೆಳಗಡೆ ನಿಂತ ಗೆಳತಿ ಭಯದಿಂದ ಕ್ಯಾಮೆರಾ ಹಿಡಿದು ನಡುಗಿದರೆ, ಈತ ಕಾಲು ಕುಣಿಸಿ ನಕ್ಕನಂತೆ. ಮುಂದಿರುವ ಸಂಸಾರ ಸಾಗರದ ಆಳ- ಅಗಲವನ್ನು ಈಗಲೇ ಸ್ವಲ್ಪವಾದರೂ ಅರ್ಥ ಮಾಡಿಕೊಳ್ಳಲು ಹೊರಟಿರಬಹುದು ಈ 'ಕ್ಲಿಫ್ ಹ್ಯಾಂಗರ್'.

ಮಕ್ಕಳಿಗೆ ಹೆಸರನ್ನಿಡುವಾಗ ಪೋಷಕರಿಗೆ ಇನ್ನಿಲ್ಲದ ಸಡಗರದ ಜೊತೆಗೆ ಕಾತುರ. ಹೊಸ ಹೆಸರನ್ನು ಹುಡುಕುವ ಧಾವಂತದಲ್ಲಿ ಅಮೆರಿಕದಲ್ಲಿ ಹಲವರು ಇನ್‌ಸ್ಟಾಗ್ರಾಮಿನ ಟೂಲ್‌ಗಳಾದ ಲೂಕ್ಸ್, ಲುಡ್ವಿಗ್ ಮೊದಲಾದ ಹೆಸರನ್ನೇ ಮಕ್ಕಳಿಗೆ ಇಡುತ್ತಿದ್ದಾರಂತೆ. ಇದರಿಂದ ಕಂಗೆಟ್ಟ ಕಂಪೆನಿಯವರು ಈಗ ಪೋಷಕರ ಹೆಸರನ್ನೇ ಟೂಲ್‌ಗೆ ಇಡಲು ತಡಕಾಡುತ್ತಿರಬಹುದು.



ಕೆನಡಾದಲ್ಲಿ ನಡೆದ ಫ್ಯಾಷನ್ ಶೋದಲ್ಲಿ ಈ ತರಳೆ ಮೊಬೈಲ್ ಸಿಮ್ ಕಾರ್ಡ್‌ಗಳಿಂದ ಮಾಡಿದ ಕಂಚುಕ ತೊಟ್ಟು ಬೆಕ್ಕಿನ ನಡಿಗೆ ತೋರಿದಳು. ನೆರೆದವರ ಹೃದಯದಲ್ಲಿ ಲಬ್‌ಡಬ್ ಬದಲು ರಿಂಗ್‌ಟೋನಿನ ರಿಂಗಣ ಕೇಳಿರಬಹುದು.



ಟೆಕ್ಸಾಸ್‌ನ ಆಡು ಮತ್ತು ನಾಯಿಮರಿಯ ಈ ಜೋಡಿ ಎಷ್ಟು ಹೊಂದಿಕೊಂಡು ಓಡಾಡುತ್ತಿವೆಯೆಂದರೆ ಅವುಗಳ ಮಾಲೀಕ ಇನ್‌ಸ್ಟಾಗ್ರಾಮಿನಲ್ಲಿ ಖಾತೆ ತೆರೆದು ವಿವರ ನೀಡಲು ಶುರು ಮಾಡಿದ್ದಾನಂತೆ. ಆಗಾಗ ಸವಾರಿ ಹೊರಡುವ ಈ ಟೆಕ್ಸಾಸ್ 'ಗ್ಯಾಂಗ್' ಮೇಲೆ  ಬೃಹತ್ ಮೊತ್ತದ ವಿಮೆ ಮಾಡಲು ಮಾಲೀಕ ನಿರ್ಧರಿಸಿದ್ದಾನಂತೆ. ಹೂಡಿಕೆಯ ಹಿಂದಿರುವ ತಂತ್ರಗಾರಿಕೆ ಕಳ್ಳರಿಗೆ ಎಚ್ಚರಿಕೆಯೋ ಅಥವಾ ಈ ಗ್ಯಾಂಗಿಗೋ ಗೊತ್ತಾಗಿಲ್ಲ.



ಪೋರ್ಚುಗಲ್‌ನ ಹಳ್ಳಿಯೊಂದರ ಜನ ಕ್ರಿಸ್ಮಸ್‌ಗೆಂದು ಹಂದಿ ಮರಿಯೊಂದನ್ನು ಕೊಬ್ಬಿಸಿದರಂತೆ, ನಮ್ಮಲ್ಲಿ ಮಾರಮ್ಮನ ಹಬ್ಬಕ್ಕೆಂದು ಕುರಿ ಕೊಬ್ಬಿಸಿದ ಹಾಗೆ. ಆದರೆ ಊರಿಡೀ ತಿರುಗಿ ಕಂಡಕಂಡವರಿಂದ ಕೈತುತ್ತು ಉಂಡು ದುಂಡಗಾಗಿ ಬಾಂಧವ್ಯ ಬೆಳೆಸಿಕೊಂಡ ಹಂದಿಯನ್ನು ಕಡಿಯಲು ಮನಸ್ಸೇ ಬಂದಿಲ್ಲವಂತೆ. ಹಂದಿ ಕೊಬ್ಬಿದಷ್ಟೂ ಊರ ಮಂದಿಗೆ ಲಾಭ ಎಂಬುದು ಇಲ್ಲಿ ಉಲ್ಟಾ ಆಗಿ ಹಂದಿ ಬೀಗುತ್ತಿದ್ದರೆ, ಕೈಗೆ ಬಂದ ತುತ್ತು ಬಾಯಿಗಿಲ್ಲ ಎಂದು ಹಳ್ಳಿಗರು ಕೊರಗುತ್ತಿರಬಹುದು.

ಅಮೆರಿಕಾದ ಸಿಲಿಕಾನ್ ವ್ಯಾಲಿಯಲ್ಲಿ ಉದ್ಯೋಗಿಗಳು ಹೆಚ್ಚು ಕೆಲಸ ಮಾಡಲು ಮಾದಕ ದ್ರವ್ಯ ಎಲ್‌ಎಸ್‌ಡಿ ನುಂಗುತ್ತಿದ್ದಾರಂತೆ. ಇದರಿಂದಾಗಿ ಎರಡು ಕಾಲುಗಳ ಮೇಲೆ ಗಂಟೆಗಟ್ಟಲೆ ನಿಂತು ಎರಡು ಕೈಗಳಿಂದ ಮಾಮೂಲಿಗಿಂತ ಎರಡು ಗಂಟೆಗೂ ಹೆಚ್ಚು ಕಾಲ ಕೆಲಸ ಮಾಡಬಹುದಂತೆ. ಎಲ್‌ಎಸ್‌ಡಿ ಪ್ರಮಾಣ ತುಸು ಹೆಚ್ಚಾದರೆ ಎರಡೂ ಕೈಗಳನ್ನು ದಿಂಬಿನಂತೆ ಮಾಡಿಕೊಂಡು ಟೇಬಲ್ ಮೇಲೆ ಎರಡೂ ಕಾಲು ಚಾಚಬಹುದು. ಇಂತಹ ಪ್ರಕರಣಗಳೂ ವರದಿಯಾಗಿವೆ ಎಂದಿದೆ ಸಮೀಕ್ಷೆಯೊಂದು.